ಯಾಕೋ ಒಮ್ಮೆಲೆ ಅವನಿಗೆ ವಿಪರೀತ ಸುಸ್ತಾದಂತೆನಿಸಿತು. ಅವ್ವುಡುಗಚ್ಚಿ ಗಟ್ಟಿಯಾಗಿ ಹಿಡಕೊಂಡಿದ್ದ ಹಗ್ಗ ಸರಕ್ಕನೆ ಜಾರಿ ಹೋದಂತೆ ಕೈಕಾಲು ಬಳಬಳ ಅಂದವು.

ಅರ್ಧ ದಿನ ರಜೆ ಗೀಚಿ ಮನೆಗೆ ಬಂದುಬಿಟ್ಟ.

ತೆರೆದೇ ಇದ್ದ ಮನೆಯಲ್ಲಿ ರಮೇಶ ಸದ್ದಾಗದಂತೆ ಹೆಜ್ಜೆ ಹಾಕಿದ. ಕೋಣೆಯಲ್ಲಿ ಅಜ್ಜ ಮೊಮ್ಮಗ ಚೆಸ್ ಆಡುತ್ತಿದ್ದರು.

"ಅಜ್ಜಾ, ಬಿಳೀ ಕಾಯಿ ನನ್ನವು. ನೀ ಯಾಕ ನಡಸ್ಲೀಕತ್ತಿ?" ರಾಹುಲನ ಚೀರು ಧ್ವನಿ.

"ಅಯ್ಯ, ಹೌದಲ್ಲೋ ಮರಿ, ತಪ್ಪಾತಪ್ಪಾ" ರಾಮರಾಯರ ದೈನ್ಯ ಧ್ವನಿ.

ಇವ ಹೋಗಿ ಕೋಣೆಯ ಬಾಗಿಲಲ್ಲಿ ನಿಂತ ಅರಿವೇ ಇಲ್ಲ ಇಬ್ಬರಿಗೂ.

"ಅಜ್ಜಾ...'' ಮತ್ತೆ ರಾಹುಲ ಅಸಹನೆಯಿಂದ ಕೂಗಿದ್ದ. "ಅದು ಆನಿ ಅದ. ಅದು ನೆಟ್ಟಗ ನಡೀತದ, ಅದನ್ಯಾಕ ಕುದುರಿ ಹಂಗ ಜಿಗಿಸಲಿಕ್ಕೆ ಹತ್ತೀ? ಥೋ ನಿನಗೇನೂ ಬರೋದೇ ಇಲ್ಲಪಾ ಅಜ್ಜಾ."

"ಹೌದೇಳೋ ನಾ ದಡ್ಡಿದ್ದೇನಿ ನನಗೇನೂ ಬರೋದಿಲ್ಲ" ಅಂದವರೇ ರಾಮರಾಯರು ಚೆಸ್ ಬೋರ್ಡನ್ನು ದುಬಲ್ಲನೆ ದೂಡಿದರು. ದೂಡಿದ ರಭಸಕ್ಕೆ ರಾಜಾ, ಮಂತ್ರಿ ಇಬ್ಬರೂ ಒಬ್ಬರ ಮೋರೆಗೊಬ್ಬರು ಬಡಕೊಂಡು ಬಿದ್ದರೆ, ಕುದುರೆ ಒಂಟೆಗಳು ಪ್ಯಾದೆಗಳ ಜಾಗಕ್ಕೆ, ಪ್ಯಾದೆಗಳು ವಿರುದ್ಧ ಚೌಕುಗಳಿಗೆ ಜಿಗಿದು ಬಿದ್ದರು. ಅವರು ಸಿಟ್ಟಿನಿಂದ ಸಣ್ಣ ಕೂಸಂತೆ ಗಲ್ಲ ಉಬ್ಬಿಸಿಕೊಂಡು ಮುಖ ಮೇಲೆ ಮಾಡಿ ತಾರಸಿ ನೋಡುತ್ತ ಕೂತು ಬಿಟ್ಟರು. ರಾಹುಲ ಮೆಲ್ಲನೆ ಕುರ್ಚಿಯಿಳಿದು ಬಂದು ಅವರ ಗದ್ದ ಹಿಡಿದು, "ಅಜ್ಜಾ ಹಂಗಲ್ಲೋ, ನೀ ರೂಲ್ಸ್ ಮುರಿದು ಆಡಿದಿ ಅಂದ್ರ ನಿನಗ ಎಂದೂ ಆಟ ಬರೂದೇ ಇಲ್ಲ ನೋಡು. ಅದಕ್ಕೇ ಬಯ್ದೆ ಅಷ್ಟs, ಶಾಣ್ಯಾ ಅಲ್ಲಾ ನೀ? ಹಂಗ ಶೆಟಗೋಬಾರದು" ಅಂತ ರಮಿಸಿ, "ನಾ ಕಾಯಿ ಹಚ್ಚತೇನಿ. ಇನ್ನೊಮ್ಮೆ ಆಡೋಣು. ಬಿಳೀ ಕಾಯಿ ಈ ಸಲ ನಿನ್ನವು ಹುಂ?" ಅಂದ.

ಕಣ್ಣಲ್ಲಿ ತುಂಬಿಕೊಳ್ಳುತ್ತಿದ್ದ ಹನಿಗಳು ಕೆಳಬೀಳುವ ಮೊದಲೇ ಕೋಣೆಗೆ ಓಡಿದ ರಮೇಶ. ಡ್ರೆಸಿಂಗ್ ಟೇಬಲ್ಲಿನ ಮುಂದೆ ಕೂತು ತಲೆ ಬಾಚಿಕೊಳ್ಳುತ್ತಿದ್ದ ನಳಿನಿ ಗಾಬರಿಯಾಗಿ ಕೈಯಲ್ಲಿದ್ದ ಹಣಿಗೆ ಒಗೆದು ಎದ್ದು ನಿಂತಳು. ತೂರಾಡುತ್ತಿದ್ದವನನ್ನು ಎದೆಗಪ್ಪಿಕೊಂಡೇ ಮಂಚದಲ್ಲಿ ತನ್ನ ಪಕ್ಕ ಕೂಡಿಸಿಕೊಂಡಳು. ರಮೇಶ ಎಷ್ಟೊತ್ತು ಹಾಗೆಯೇ ಬಿಕ್ಕುತ್ತಿದ್ದನೋ ಅವಳೂ ಮಿಸುಕಾಡಲಿಲ್ಲ, ಸಂಜೆಯಾಗಿದ್ದೂ ತಿಳಿಯದೆ ಇಬ್ಬರೂ ಒಬ್ಬರಿಗೊಬ್ಬರು ಆತುಕೊಂಡೇ ಕೂತಿದ್ದರು. ಸಂಜೆಯ ಬೆಳಕಿಗೆ ಕಿಡಕಿಯ ಸರಳುಗಳ ನೆರಳು ಉದ್ದುದ್ದ ಬೆಳೆದು ರಮೇಶನ ಮೋರೆಯ ತುಂಬ ಬಿದ್ದಾಗ ನಳಿನಿ ಇವನನ್ನೊಮ್ಮೆ ದಿಟ್ಟಿಸಿ ನೋಡಿದವಳೇ, "ನೀವೀಗ ಥೇಟ್ ಸಲಾಕೆಯ ಹಿಂದಿನ ಕೈದಿಯ ಹಂಗ ಕಾಣಲಿಕತ್ತೀರಿ ನೋಡ್ರಿ" ಅಂತ ಕುಲುಕುಲು ನಗತೊಡಗಿದಳು. ಇವನೂ ಅವಳ ಹುಕಿಯ ಜಾಡು ಹಿಡಿದಂತೆ "ಸಲಾಕೆನೂ ಹೋತು ಕೈದಿಯೂ ಹೋದ ಡುಂ ಡುಮಕ್" ಅಂದವನೇ ಥಟ್ಟೆಂದು ದೀಪದ ಗುಂಡಿ ಒತ್ತಿದ. ಜಗ್ಗನೆ ಕೋಣೆಯ ತುಂಬಾ ಬೆಳಕಾಯಿತು.

**ಸಪ್ನಾ ಕಟ್ಟಿ**

ಪುಣೆಯಲ್ಲಿ ನೆಲೆಸಿರುವ ಸಪ್ನಾ ಕಟ್ಟಿ ಅನುವಾದಕಿ ಮತ್ತು ಕತೆಗಾರ್ತಿ. ಕತೆ, ಕವನಗಳು ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಕರ್ನಾಟಕ ವಿಶ್ವವಿದ್ಯಾಲಯದಿಂದ ಭೌತಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಮೂಲತಃ ಧಾರವಾಡದವರು.